ಎಂ.ಪಿ.ಇ. ಸೊಸೈಟಿಯ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಲಾ, ವಿಜ್ಞಾನ, ವಾಣಿಜ್ಯ,
ವ್ಯವಹಾರ ಆಡಳಿತ, ಬಿ.ಸಿ.ಎ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಹೊನ್ನಾವರ–581334 (ಉ.ಕ.)

**ಪ್ರೀತಿಯ ಪೂರ್ವ ವಿದ್ಯಾರ್ಥಿಗಳು ಹಾಗೂ ಸಂಸ್ಥೆಯ ಅಭಿಮಾನಿಗಳಲ್ಲಿ**

# ನಿವೇದನೆ

ಇವರಿಗೆ,

ಮಾನ್ಯರೇ,

ಆತ್ಮೀಯ ನಮಸ್ಕಾರ.

ಶರಾವತಿಯ ಸಂಗಮತಾಣವಾದ ಹೊನ್ನಾವರದಲ್ಲಿ ಕಳೆದ ಆರು ದಶಕಗಳಿಂದಲೂ ಜ್ಞಾನ–ಸಂಸ್ಕೃತಿಯ ಕೇಂದ್ರವಾಗಿ ನಮ್ಮೀ ಎಂ.ಪಿ.ಇ. ಸಂಸ್ಥೆ ತನ್ನದೇ ಆದ ಹೆಜ್ಜೆ ಗುರುತನ್ನು ದಾಖಲಿಸುತ್ತ ಬಂದಿದೆ. 'ಸಾ ವಿದ್ಯಾ ಯಾ ವಿಮುಕ್ತಯೇ' ಎಂಬುದು ನಮ್ಮ ಧ್ಯೇಯ ವಾಕ್ಯ. ನಮ್ಮ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಸಿ.ಬಿ.ಎಸ್.ಇ. ಶಾಲೆ, ಪದವಿ ಪೂರ್ವಕಾಲೇಜು, ಪದವಿ ಕಾಲೇಜು, ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಾವಿರಾರು ವಿದ್ಯಾರ್ಥಿಗಳಿಗೆ ಸೂಕ್ತವಾದ ಜ್ಞಾನ, ವಿಚಾರ, ಕೌಶಲ್ಯ, ಕ್ರಿಯಾಶೀಲತೆಯನ್ನು ಒದಗಿಸಿ ಅವರನ್ನು ಸಮಾಜದ ಸಂಪತ್ತನ್ನಾಗಿಸುವಲ್ಲಿ ನಾವು ನಿರಂತರ ಶ್ರಮಿಸುತ್ತಿದ್ದೇವೆ ಹಾಗೂ ಡಾ. ಎಂ. ಪಿ. ಕರ್ಕಿ ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ & ರೀಸರ್ಚ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ಸಂಶೋಧನಾ ತರಬೇತಿ, ಸ್ಪರ್ಧಾತ್ಮಕ ಪರೀಕ್ಷಾ ತಯಾರಿ ಹಾಗೂ ಉದ್ಯೋಗಾಧಾರಿತ ಕೌಶಲ್ಯಗಳನ್ನು ಒದಗಿಸಿ ವಿದ್ಯಾರ್ಥಿಗಳು ಸ್ವತಂತ್ರ ಬದುಕನ್ನು ರೂಪಿಸಿಕೊಳ್ಳಲು ಪ್ರೇರೇಪಿಸುತ್ತಿವೆ. ಸುಮಾರು 56 ವರ್ಷಗಳ ಇತಿಹಾಸವುಳ್ಳ ನಮ್ಮ ವಿದ್ಯಾಸಂಸ್ಥೆಯಿಂದ ಈವರೆಗೆ ಸುಮಾರು 25000ಕ್ಕಿಂತ ಹೆಚ್ಚು ವಿದ್ಯಾರ್ಥಿ/ವಿದ್ಯಾರ್ಥಿನಿಯರು ಶಿಕ್ಷಣವನ್ನು ಪಡೆದಿರುತ್ತಾರೆ. ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಎಲ್.ಕೆ.ಜಿ.ಯಿಂದ ಪಿ.ಜಿ. ಯವರೆಗೆ ಸರಿ ಸುಮಾರು 2500 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ನಮ್ಮಲ್ಲಿ ವ್ಯಾಸಂಗ ಮಾಡುತ್ತಿರುವ ಬಹುಪಾಲು ವಿದ್ಯಾರ್ಥಿಗಳು ಬಡ ಹಾಗೂ ಮಧ್ಯಮ ವರ್ಗದವರಾಗಿರುವುದರಿಂದ ಅವರಿಗೆ ಆಸರೆಯಾಗಲು ಸಂಸ್ಥೆಯು **'ವಿದ್ಯಾಸಂಜೀವಿನಿ'** ಎಂಬ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯಲ್ಲಿ ಸಂಗ್ರಹಿಸಿದ ನಿಧಿಯಿಂದ ಪ್ರತಿ ವರ್ಷ ಆಯ್ದ ಫಲಾನುಭವಿ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡುವುದು ನಮ್ಮ ಗುರಿಯಾಗಿದೆ. 'ಅನ್ನದಾನಕ್ಕಿಂತ ಇನ್ನು ದಾನವು ಇಲ್ಲ' ಎಂಬ ಮಾತಿದೆ. ಹೀಗಾಗಿ ಬೌದ್ಧಿಕವಾದ ಹಸಿವನ್ನು ನೀಗಿಸಲು ಬರುವ ಬಡ ವಿದ್ಯಾರ್ಥಿಗಳ ಅನ್ನದ ಹಸಿವನ್ನೂ ನೀಗಿಸುವ ಉದ್ದೇಶದಿಂದ ರಿಯಾಯಿತಿ ದರದಲ್ಲಿ ಶುಚಿ–ರುಚಿಯಾದ ಮಧ್ಯಾಹ್ನದ ಊಟದ ಯೋಜನೆ ರೂಪಿಸಿದ್ದೇವೆ. ವಿದ್ಯಾಸಂಜೀವಿನಿ ಯೋಜನೆಯ ಅಡಿಯಲ್ಲಿ ಬಡ–ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಹಾಯ, ಪಾಕಶಾಲೆ, ಅಗತ್ಯವಿದ್ದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪೂರಕವಾಗುವ ಕಟ್ಟಡ ನಿರ್ಮಾಣ ಮಾಡಲು ಹಾಗೂ ಇನ್ನಿತರ ಯೋಜನೆಗಳಿಗೆ ನಾವು ದಾನಿಗಳಿಂದ, ಶಿಕ್ಷಣ ಪ್ರೇಮಿಗಳಿಂದ, ಪೂರ್ವ ವಿದ್ಯಾರ್ಥಿಗಳಿಂದ ಉದಾರವಾದ ಆರ್ಥಿಕ ನೆರವನ್ನು ಅಪೇಕ್ಷಿಸುತ್ತಿದ್ದೇವೆ. ನಿಮ್ಮ ನೆರವನ್ನು ನಾವು ಈ ಯೋಜನೆಗಳಿಗೆ ಸದ್ವಿನಿಯೋಗ ಮಾಡುತ್ತೇವೆ.

ನೀವು ನೀಡುವ ಮೊತ್ತವು 80G ತೆರಿಗೆ ವಿನಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಬಲ್ಲ ನಮ್ಮ ಯೋಜನೆಗಳಿಗೆ ತಮ್ಮ ತನು–ಮನ–ಧನ ಸಹಾಯವನ್ನು ಮಾಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತಿದ್ದೇವೆ.

ವಂದನೆಗಳೊಂದಿಗೆ,

**ಶ್ರೀ ಕೃಷ್ಣಮೂರ್ತಿ ಭಟ್ಟ, ಶಿವಾನಿ**
**ಅಧ್ಯಕ್ಷರು**
ಎಂ.ಪಿ.ಇ. ಸೊಸೈಟಿ ಹೊನ್ನಾವರ

**ವಿದ್ಯಾ ಸಂಜೀವಿನಿ ಆರ್ಥಿಕ ನೆರವು ನೀಡಲು ಬ್ಯಾಂಕ್‌ಖಾತೆ ವಿವರ:**

ಖಾತೆಯ ಹೆಸರು : M.P.E. Society Honavar Vidyasanjeevini Student Welfare Fund
ಬ್ಯಾಂಕ್ ಹೆಸರು : ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬ್ರ್ಯಾಂಚ್ : ಹೊನ್ನಾವರ
ಖಾತೆ ಸಂ. : 2912500100357501
ಐ.ಎಫ್.ಎಸ್.ಸಿ. : KARB0000291 ಎಂ.ಐ.ಸಿ.ಆರ್: 581052602

**ಮಾಹಿತಿಗಾಗಿ ಸಂಪರ್ಕಿಸಿ :7676078393, 7829546478**